30–40 ದಿನಗಳ ನಂತರ ಅಥವಾ ನೀರು ಲಭ್ಯವಿದ್ದ ಪಕ್ಷದಲ್ಲಿ ವಿವಿಧ ಬೆಳೆಗಳ ಸಂದಿಗ್ಧ ಹಂತಗಳಲ್ಲಿ 5 ಸೆಂ.ಮೀ. (200 ಘನ ಮೀಟರ/ಎಕರೆ) ಆಳದ ನೀರನ್ನು ಒಂದು ಪೂರಕ (ಜೀವರಕ್ಷಕ) ನೀರಾವರಿಯಾಗಿ ಕೊಡಬೇಕು. ಈ ರೀತಿಯಾಗಿ ನೀರಾವರಿಯನ್ನು ಕೊಡುವುದರಿಂದ, ಬೆಳೆಗಳ ಇಳುವರಿ ಶೇ. 25 ರಿಂದ 123 ಪ್ರತಿಶತ ಹೆಚ್ಚಾಗುತ್ತದೆ.

ಇದಲ್ಲದೇ, ಕೆಲ ಸಂದರ್ಭಗಳಲ್ಲಿ ಕೃಷಿ ಹೊಂಡದ ನೀರನ್ನು ಬಿತ್ತನೆ ಪೂರ್ವ ನೀರಾವರಿ ರೂಪದಲ್ಲಿ ಕೊಡುವುದರಿಂದಲೂ ಸಕಾಲದಲ್ಲಿ ಬಿತ್ತನೆ ಮಾಡಲು ಸಾಧ್ಯ. ಅಲ್ಲದೆ ಈ ಪದ್ಧತಿಯಿಂದ ಶೇ. 30 ರಿಂದ ಶೇ. 50 ರಷ್ಟು ಹೆಚ್ಚಿನ ಇಳುವರಿ ಪಡೆಯಬಹುದು.

**ಯಾವ ಬೆಳೆಯನ್ನು ಬೆಳೆಯಬೇಕು :** ಕೃಷಿ ಹೊಂಡದ ನೀರಿನಿಂದ ಹೆಚ್ಚಿನ ಲಾಭವನ್ನು ಪಡೆಯಬೇಕಾದರೆ ಆರ್ಥಿಕವಾಗಿ ಲಾಭದಾಯಕವಾದ ಬೆಳೆಯನ್ನು ಆಯ್ಕೆ ಮಾಡಿಕೊಳ್ಳಬೇಕು. ಕೃಷಿ ಹೊಂಡದ ನೀರನ್ನು ಜೋಳ, ಗೋಧಿ ಅಥವಾ ಕಡಲೆಗೆ ಕೊಡುವ ಬದಲು ಹತ್ತಿ, ತೊಗರಿ ಹಾಗೂ ಮೆಣಸಿನಕಾಯಿ ಅಂತಹ ಬೆಳೆಗಳಿಗೆ ಕೊಟ್ಟರೆ ಹೆಚ್ಚಿನ ಲಾಭವನ್ನು ಪಡೆಯಬಹುದು.

ಒಂದು ಅಧ್ಯಯನದ ಪ್ರಕಾರ, ರೈತರ ಜಮೀನಿನಲ್ಲಿ 500 ಘನ ಮೀಟರದಷ್ಟು ನೀರು ಕೃಷಿ ಹೊಂಡದಲ್ಲಿ ಮಳೆಗಾಲ ಮುಕ್ತಾಯದ ನಂತರ (ನವೆಂಬರ ತಿಂಗಳಲ್ಲಿ) ಲಭ್ಯವಿದ್ದರೆ, ನಾಲ್ಕು ತಿಂಗಳ (ನವೆಂಬರ–ಫೆಬ್ರುವರಿ) ಅವಧಿಯ ಯಾವುದಾದರು ತರಕಾರಿ ಬೆಳೆಯನ್ನು ಬೆಳೆದು ಹೆಚ್ಚಿನ ಲಾಭ ಪಡೆಯಬಹುದೆಂದು ತೋರಿಸಿದ್ದಾರೆ. ಸುಮಾರು 20 ಪ್ರತಿಶತ (100 ಘನ ಮೀಟರ) ದಷ್ಟು ನೀರು ಆವಿ/ಬಸಿಯುವಿಕೆಯಿಂದ ಪೋಲಾದರೂ ಸಹ ಲಭ್ಯವಿರುವ 400 ಘನ ಮೀಟರ ನೀರಿನಿಂದ 0.1 ಹೆ (10 ಗುಂಟೆ) ಜಾಗದಲ್ಲಿ ತರಕಾರಿಯನ್ನು ಬೆಳೆದು ಅದಕ್ಕೆ ಲಭ್ಯವಿರುವ ನೀರನ್ನು ತುಂತರು ನೀರಾವರಿ ಮೂಲಕ ನೀರುಣಿಸಿ ಅತಿ ಹೆಚ್ಚಿನ ಲಾಭಾವನ್ನು ಪಡೆಯಬಹುದು.

**ಕಡಿಮೆ ವೆಚ್ಚದ ಪಂಪು :** ಹೊಂಡದಿಂದ ನೀರನ್ನು ಮೇಲೆತ್ತಲು ಇತ್ತೀಚೆಗೆ ಹಗುರಾದ 1.5 ಎಚ್.ಪಿ. (3000 ಆರ್.ಪಿ. ಎಮ್) ಪಂಪುಗಳು ಲಭ್ಯವಿರುತ್ತವೆ. ಇವುಗಳಿಂದ 6 ಸ್ಪ್ರಿಂಕ್ಲರಳನ್ನು ಉಪಯೋಗಿಸಬಹುದು. ಇವುಗಳು ಪೆಟ್ರೋಲ್ ಚಾಲಿತ ಡಿಸ್ಸೆಲ್‌ದಿಂದ ಓಡುವ ಪಂಪುಗಳಾಗಿವೆ. ಇವುಗಳು ರೂ. 15,000/– ಕ್ಕೆ ದೊರೆಯುವವು ಮತ್ತು ಇವುಗಳ ತೂಕ 17 ಕೆಜಿ ಯಷ್ಟಿರುತ್ತದೆ.

## ಕೃಷಿ ಹೊಂಡದ ಇತರೆ ಉಪಯೋಗಗಳು

1. ನೀರನ್ನು ಮನೆ ಉಪಯೋಗಕ್ಕಾಗಿ/ದನಕರುಗಳಿಗೆ ಕುಡಿಯಲು ಉಯಯೋಗಿಸಬಹುದು.
2. ಒಣಬೇಸಾಯದ ನೀರಿನ ಲಭ್ಯತೆ ಅತಿ ವಿರಳ, ಅಂತಹ ಸ್ಥಳದಲ್ಲಿ ಈ ಕೃಷಿ ಹೊಂಡದ ನೀರನ್ನು ಔಷಧದ ಮಿಶ್ರಣ ತಯಾರಿಸಿ ಕಡಲೆ / ತೊಗರಿ / ಮೆಣಸಿನಕಾಯಿ ಗಿಡಗಳಿಗೆ ಸಿಂಪಡಿಸಲು ಬಳಸಬಹುದು. ಇತ್ತೀಚಿನ ದಿನಗಳಲ್ಲಿ ಕೆಲ ರೈತರು ಕೃಷಿ ಹೊಂಡದ ನೀರನ್ನು ಮೇಲಿನ ಉದ್ದೇಶಕ್ಕಾಗಿ ಮಾರಾಟ ಮಾಡುತ್ತಾರೆ.
3. ನೀರು ನಾಲ್ಕು ತಿಂಗಳಿಗಿಂತಲೂ ಹೆಚ್ಚಿಗೆ ಲಭ್ಯವಿದ್ದರೆ, ಮೀನುಗಾರಿಕೆಗೆ ಈ ನೀರನ್ನು ಬಳಸಬಹುದು.


: ಲೇಖಕರು:

**ಡಾ. ರವಿ. ವೈ., ಡಾ. ಆರ್. ಬಿ. ನೆಗಳೂರ,**
**ಶ್ರೀಮತಿ. ಹೀನಾ. ಎಮ್.ಎಸ್.,**
**ಡಾ. ಸೈಯದ ಸಮೀನ ಅಂಜುಮ್,**
**ಡಾ. ಸಂತೋಷ ಶಿಂದೆ, ಡಾ. ಸವಿತಾ ಬಿ.**

ಸಂಪಾದಕರು

**ಡಾ. ಆರ್. ಬಿ. ನೆಗಳೂರ**
ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು ಕೃಷಿ ವಿಜ್ಞಾನ ಕೇಂದ್ರ, ಇಂಡಿ

ಪ್ರಕಾಶಕರು

**ಡಾ. ಹೆಚ್. ಬಿ ಬಬಲಾದ**
ಸಹ ವಿಸ್ತರಣಾ ನಿರ್ದೇಶಕರು, ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರ, ವಿಜಯಪುರ

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿರಿ**

ಐ.ಸಿ.ಎ.ಆರ್.–ಕೃಷಿ ವಿಜ್ಞಾನ ಕೇಂದ್ರ, ಸ್ಟೇಷನ್ ರಸ್ತೆ, ಇಂಡಿ–586 209
ದೂರವಾಣಿ : (08359)–225666
ಇಮೇಲ್ : kvkindi@uasd.in
kvkindi2016@gmail.com


**ಕೃಷಿ ವಿಶ್ವವಿದ್ಯಾಲಯ, ಧಾರವಾಡ**

**ಐ.ಸಿ.ಎ.ಆರ್.–ಕೃಷಿ ವಿಜ್ಞಾನ ಕೇಂದ್ರ, ಇಂಡಿ**

# ಬರಕ್ಕೆ ಪರಿಹಾರ – ಕೃಷಿ ಹೊಂಡ




**ವಿಸ್ತರಣಾ ಹಸ್ತ ಪತ್ರಿಕೆ ಸಂಖ್ಯೆ.17**
**ಸೆಪ್ಟೆಂಬರ್, 2019**

**ಐ.ಸಿ.ಎ.ಆರ್.–ಕೃಷಿ ವಿಜ್ಞಾನ ಕೇಂದ್ರ,**
**ಸ್ಟೇಶನ್ ರಸ್ತೆ, ಇಂಡಿ. 586–209**

## ಬರಕ್ಕೆ ಪರಿಹಾರ – ಕೃಷಿ ಹೊಂಡ

ಕೃಷಿ ಭೂಮಿಯಿಂದ ಹರಿದು ಬರುವ ಹೆಚ್ಚುವರಿ ನೀರನ್ನು ಸಾಧ್ಯವಿರುವಲ್ಲಿ ಕೃಷಿ ಹೊಂಡಗಳನ್ನು ನಿರ್ಮಿಸಿ. ಈ ನೀರನ್ನು ಬೆಳೆಗಳಿಗೆ ರಕ್ಷಕ ನೀರಾವರಿಗೆ ಬಳಸುವುದರಿಂದ ಬೆಳೆಗಳಿಗಾಗುವ ಹಾನಿಯನ್ನು ಸ್ವಲ್ಪಮಟ್ಟಿಗೆ ಕಡಿಮೆ ಮಾಡಬಹುದು ಮತ್ತು ಈ ರೀತಿ ಪೂರಕ ನೀರಾವರಿಯಿಂದ ಬೆಳೆಯ ಉತ್ಪಾದನೆಯನ್ನು ಹೆಚ್ಚಿಸಬಹುದು.

ಇತ್ತೀಚಿನ ವರ್ಷಗಳಲ್ಲಿ ಹವಾಮಾನ ಬದಲಾವಣೆಯಿಂದ ಮಳೆಯ ಹಂಚಿಕೆಯಲ್ಲಿ ಬಹಳಷ್ಟು ಬದಲಾವಣೆಯಾಗಿದೆ. ಒಟ್ಟು ವಾರ್ಷಿಕ ಮಳೆಯಲ್ಲಿ ಬಹಳ ಬದಲಾವಣೆಯಾಗದಿದ್ದರೂ ಮಳೆಯ ದಿನಗಳು ಕಡಿಮೆಯಾಗಿವೆ. ಬೀಳುವ ಮಳೆಯ ಪ್ರಮಾಣ ಹೆಚ್ಚಾಗಿರುವದರಿಂದ ಕೊಚ್ಚಣೆ ನೀರು (Runoff) ಸಹ ಹೆಚ್ಚು ಹರಿದು ಹೋಗುತ್ತದೆ. ಈ ರೀತಿ ಹರಿದು ಹೋಗುವ ನೀರನ್ನು ಪೋಲಾಗದಂತೆ ಕೃಷಿ ಹೊಂಡಗಳನ್ನು ನಿರ್ಮಿಸಿ. ಅವುಗಳಲ್ಲಿ ಸಂಗ್ರಹಿಸಬಹುದು. ಹವಾಮಾನ ವೈಪರಿತ್ಯದ ದಿನಮಾನಗಳಲ್ಲಿ ಕೃಷಿ ಹೊಂಡವು ಮಹತ್ವದ ಪಾತ್ರವನ್ನು ವಹಿಸುತ್ತದೆ. ಇತ್ತೀಚಿನ ದಿನಮಾನಗಳಲ್ಲಿ ಮಳೆ ಹಂಚಿಕೆಯನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡಿದಾಗ ಮೇ ತಿಂಗಳ ಕೊನೆಯಲ್ಲಿ, ಜೂನ ಮೊದಲನೇಯ ವಾರದಲ್ಲಿ ಮತ್ತು ಸೆಪ್ಟೆಂಬರ್ ತಿಂಗಳಲ್ಲಿ ಹೆಚ್ಚಿನ ಮಳೆಯಾಗಿ ಕೃಷಿ ಹೊಂಡಗಳು ತುಂಬುವ ಸಾಧ್ಯತೆ ಹೆಚ್ಚಿರುತ್ತದೆ.

ರಾಜ್ಯ ಸರ್ಕಾರದ ಜನಪ್ರೀಯ ಯೋಜನೆಗಳಲ್ಲಿ ಒಂದಾದ ಕೃಷಿ ಭಾಗ್ಯ ಯೋಜನೆಯಲ್ಲಿ ರಾಜ್ಯದ ಒಣಬೇಸಾಯದ ವಲಯಗಳಲ್ಲಿ ರೈತರ ಜಮೀನುಗಳಲ್ಲಿ ಕೃಷಿ ಹೊಂಡಗಳನ್ನು ರಚಿಸುವುದು ಒಂದಾಗಿದೆ. ಈ ವರ್ಷದ ಬೇಸಿಗೆಯಲ್ಲಿ ರಾಜ್ಯಾದ್ಯಂತ ಸಾವಿರಾರು ಕೃಷಿ ಹೊಂಡಗಳನ್ನು ರಚಿಸಲಾಗಿದೆ.

ನೀರಿನ ಲಭ್ಯತೆ : ಸಂಶೋಧನೆಗಳ ಫಲಿತಾಂಶದ ಪ್ರಕಾರ ಸುಮಾರು 580–650 ಮಿ. ಮೀ. ಮಳೆ ಬೀಳುವ ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಪ್ರತಿ ಹೆಕ್ಟೇರ ಇಳಿಮೇಡು (Catchment) ಪ್ರದೇಶದಿಂದ 150–200 ಘನ ಮೀ. (ಒಂದು ಘನ ಮೀಟರ = 1000 ಲೀಟರ್) ನೀರು ಲಭ್ಯವಾಗುತ್ತದೆ. ಎಂದು ಅಂದಾಜಿಸಲಾಗಿದೆ. ನೀರಿನ ಲಭ್ಯತೆಗೆ ಅನುಗುಣವಾಗಿ ಕೃಷಿ ಹೊಂಡಗಳನ್ನು ರಚಿಸಲಾಗುತ್ತದೆ. ಸಾಮಾನ್ಯವಾಗಿ ಕೃಷಿ ಹೊಂಡಗಳು ವರ್ಷದಲ್ಲಿ ಎರಡು ಸಲ ತುಂಬುವದರಿಂದ ಕೃಷಿ ಹೊಂಡದ ಗಾತ್ರದ ಎರಡರಷ್ಟು ನೀರು ಕೃಷಿ ಉಪಯೋಗಕ್ಕೆ ಲಭ್ಯವಿರುತ್ತದೆ. ಒಟ್ಟು ಲಭ್ಯವಿರುವ ನೀರನಿಲ್ಲಿ ಶೇ. 20–40 ರಷ್ಟು ಆವಿಯಾಗಿ ಅಥವಾ ಬಸಿಯುವಿಕೆಯಿಂದ ನಷ್ಟವಾಗುತ್ತದೆ. ಕೃಷಿ ಭಾಗ್ಯ ಯೋಜನೆಯಲ್ಲಿ ಇಳಿಮೇಡು ಪ್ರದೇಶ ಹಾಗೂ ಮಳೆಯ ಹಂಚಿಕೆಗೆ ಅನುಗುಣವಾಗಿ ಕೆಳಗೆ ಕಾಣಿಸಿದ ಕೋಷ್ಟಕದಂತೆ ಕೃಷಿ ಹೊಂಡದ ಗಾತ್ರವನ್ನು ನಿಗದಿ ಪಡಿಸಿದೆ.

### ವಿವಿಧ ಗಾತ್ರದ ಕೃಷಿ ಹೊಂಡಗಳು ಮತ್ತು ಅವುಗಳ ಶೇಖರಣಾ ಸಾಮರ್ಥ್ಯ

| | ಬದು ಇಳಿಜಾರು ಇರುವ ಹೊಂಡ | | ಬದು ಇಳಿಜಾರು ಇರುವ ಹೊಂಡ | |
|---|---|---|---|---|
| ಕ್ರ. ಸಂ. | ಹೊಂಡದ ಅಳತೆ | ಹೊಂಡದ ನೀರು ಶೇಖರಣಾ ಸಾಮರ್ಥ್ಯ (ಘ.ಮೀ.) | ಹೊಂಡದ ಅಳತೆ | ಹೊಂಡದ ನೀರು ಶೇಖರಣಾ ಸಾಮರ್ಥ್ಯ (ಘ.ಮೀ.) |
| 1. | 21x21x3 ಮೀ. | 981 | 21x21x3 ಮೀ. | 837 |
| 2. | 18x18x3 ಮೀ. | 684 | 18x18x3 ಮೀ. | 567 |
| 3. | 15x15x3 ಮೀ. | 441 | 15x15x3 ಮೀ. | 357 |
| 4. | 12x12x3 ಮೀ. | 252 | 12x12x3 ಮೀ. | 189 |
| 5. | 10x10x3 ಮೀ. | 156 | 10x10x3 ಮೀ. | 111 |

**ಕೃಷಿ ಹೊಂಡದ ನೀರಿನ ಬಳಕೆ :**

ಕೃಷಿ ಹೊಂಡಗಳಲ್ಲಿ ನೀರನ್ನು ಸಂಗ್ರಹಿಸಿ, ವಿವಿಧ ಬೆಳೆಗಳಿಗೆ ಸಂದಿಗ್ಧ ಹಂತಗಳಲ್ಲಿ ರಕ್ಷಕ / ಪೂರಕ ನೀರಾವರಿಯನ್ನು ಕೊಡುವುದರಿಂದ ವಿವಿಧ ಬೆಳೆಗಳ ಉತ್ಪಾದನೆಯನ್ನು ಗಣನೀಯವಾಗಿ ಹೆಚ್ಚಿಸಬಹುದು.

ಕೃಷಿ ಹೊಂಡದಲ್ಲಿ ಸಂಗ್ರಹವಾದ ನೀರು ಅಮುಲ್ಯವಾದದ್ದು, ಅದನ್ನು ದಕ್ಷತೆಯಿಂದ ಮತ್ತು ಜಾಣತನದಿಂದ ಬಳಸಬೇಕು. ಒಂದು ಹೆಕ್ಟೇರ ಪ್ರದೇಶಕ್ಕೆ "1 ಸೆಂ. ಮೀ" ಆಳ ನೀರು ಉಣಿಸಬೇಕಾದರೆ (100x100x0.01m) 100 ಘನ ಮೀಟರ (1,00,000 ಲೀಟರ) ನೀರು ಬೇಕಾಗುತ್ತದೆ. ಒಂದು ಎಕರೆಗೆ 40 ಘನ ಮೀಟರದಷ್ಟು ನೀರು ಬೇಕು. ಈ ರೀತಿ ಸಂಗ್ರಹವಾದ ನೀರನ್ನು ಉಪಯೋಗಿಸಬೇಕಾದಾಗ ಯಾವಾಗ? ಹೇಗೆ? ಎಷ್ಟು ನೀರು ಕೊಡಬೇಕು? ಮತ್ತು ಯಾವ ಬೆಳೆಯನ್ನು ಬೆಳೆಯಬೇಕು? ಎಂಬ ಅಂಶಗಳನ್ನು ಪರಿಗಣಿಸ ಬೇಕಾಗುತ್ತದೆ.





### ಕೃಷಿ ಹೊಂಡದಿಂದ ಕಡಲೆಗೆ ಸಿಂಚನ ನೀರಾವರಿ

**ಯಾವಾಗ :** ವಿವಿಧ ಹಂಗಾಮುಗಳಲ್ಲಿ 20–25 ದಿನಗಳ ಬರ (dry spells) ಬಿದ್ದಾಗ ಅಥವಾ ಕೆಳಗೆ ಕೋಷ್ಟಕದಲ್ಲಿ ಪಟ್ಟಿ ಮಾಡಿದಂತೆ ವಿವಿಧ ಬೆಳೆಗಳ ಸಂದಿಗ್ಧ ಹಂತದಲ್ಲಿ ನೀರುಣಿಸಬೇಕು. ಇದಲ್ಲದೆ ಈ ನೀರನ್ನು ಈರುಳ್ಳಿ ಅಥವಾ ತೊಗರಿ ಬೆಳೆಯ ಸಸಿಗಳನ್ನು ಮಾಡಲು/ನರ್ಸರಿ ಮಾಡಲು ಉಪಯೋಗಿಸಬಹುದು. ಜಮೀನಿನಲ್ಲಿ, ಕೇವಲ ಹಿಂಗಾರಿ ಬೆಳೆಯನ್ನು ಬೆಳೆಯುತ್ತಿದ್ದರೆ, ಕೃಷಿ ಹೊಂಡದ ಜಮೀನಿಗೆ ಹಾಯಿಸಿ ಜಮೀನಿನ ಮಣ್ಣಿನ ತೇವಾಂಶವನ್ನು ಹೆಚ್ಚಿಸಬಹುದು. ಇದು ಹಿಂಗಾರಿ ಬೆಳೆಯನ್ನು ಸಕಾಲಕ್ಕೆ ಬಿತ್ತನೆ ಮಾಡಲು ಹಾಗೂ ಜಮೀನಿನ ಮಣ್ಣಿನಲ್ಲಿ ಕೆಲ ತಿಂಗಳವರೆಗೆ ನೀರು ಸಂಗ್ರಹವಾಗಿರುವುದರಿಂದ ಉತ್ತಮ ಬೆಳೆಯನ್ನು ನಿರೀಕ್ಷಿಸಬಹುದು.

### ವಿವಿಧ ಬೆಳೆಗಳಲ್ಲಿ ನೀರು ಒದಗಿಸಬೇಕಾದ ಸಂದಿಗ್ಧ ಹಂತಗಳು

| ಬೆಳೆಗಳು | ಸಂದಿಗ್ಧ ಹಂತಗಳು | ಬೆಳೆಗಳು | ಸಂದಿಗ್ಧ ಹಂತಗಳು |
|---|---|---|---|
| ಜೋಳ | ಹೂವಾಡುವಾಗ | ತೊಗರಿ | ಹೂವಾಡುವ ಸಮಯ |
| | ಕಾಳು ಕಟ್ಟುವಾಗ | | ಕಾಳು ಬಲಿಯುವಾಗ |
| ಸಜ್ಜೆ | ಹೂವಾಡುವಾಗ | ಗೋದಿ | ಹೂವಾಡುವಾಗ |
| | ಕಾಳು ಕಟ್ಟುವಾಗ | | ಕಾಳು ಕಟ್ಟುವಾಗ |
| ಸೂರ್ಯಕಾಂತಿ | ಮೊಗ್ಗು ಬರುವಾಗ | ಕಡಲೆ | ಹೂವಾಡುವಾಗ |
| | ಕಾಳು ಕಟ್ಟುವಾಗ | | ಕಾಯಿ ಬಲಿಯುವಾಗ |
| ಶೇಂಗಾ | ಬಾರಂಗಿ ಬಿಡುವಾಗ | ಕುಸುಬೆ | ಹೂವಾಡುವಾಗ |
| | ಕಾಯಿ ಬಲಿಯುವ ಸಮಯ | | ಕಾಯಿ ಬಲಿಯುವ ಸಮಯ |

**ಹೇಗೆ ನೀರು ಕೊಡಬೇಕು :** ಕೃಷಿ ಹೊಂಡದಲ್ಲಿ ಮಿತ ಪ್ರಮಾಣದಲ್ಲಿ ಲಭ್ಯವಿರುವುದರಿಂದ ನೀರನ್ನು ದಕ್ಷವಾಗಿ ಬಳಸಬೇಕು. ಆದ್ದರಿಂದ, ನೀರನ್ನು ಸೂಕ್ಷ್ಮ (ತುಂತುರು ಅಥವಾ ಸಿಂಚನ) ನೀರಾವರಿ ಪದ್ಧತಿ ಮುಖಾಂತರ ಕೊಡಬೇಕು. ಸಾಂಪ್ರದಾಯಿಕ ಪದ್ಧತಿಗಳಾದ ಹಾಯಿ ನೀರಾವರಿಯಿಂದ ನೀರುಣಿಸುವದರಿಂದ ಬಹಳಷ್ಟು ನೀರು ಪೋಲಾಗುತ್ತದೆ.

**ಎಷ್ಟು ನೀರು ಕೊಡಬೇಕು :** ಮುಂಗಾರು ಹಂಗಾಮಿನಲ್ಲಿ ಬೆಳೆ ಬೆಳೆಯುವ ಅವಧಿಯಲ್ಲಿ 15–20 ದಿನಗಳ ಒಣ ಬರ (dry spells) ಬಂದರೆ ಅಥವಾ ಬೆಳೆಗಳ ಸಂದಿಗ್ಧ ಹಂತಗಳಲ್ಲಿ 3–4 ಸೆಂ.ಮೀ. (120–160 ಘನಮೀಟರ/ಎಕರೆಗೆ) ಆಳ ಸಿಂಚನ ನೀರಾವರಿ ಮೂಲಕ ಒಂದು ಅಥವಾ ಎರಡು ಪೂರಕ (Supplementary) ನೀರಾವರಿಯನ್ನು ಕೊಡಬೇಕು. ಹಿಂಗಾರು ಹಂಗಾಮಿನಲ್ಲಿ ಒಣ ಬರವಿದ್ದರೆ ಬೆಳೆ ಬೆಳೆದು